

ಬೆಳಗ್ಗೆ ಹತ್ತು ಗಂಟೆಯ ಸಮಯ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಮುಂಭಾಗ ಕಳ್ಳ ಹೆಜ್ಜೆಗಳನ್ನಿಡುತ್ತಾ ರಾಗಿಣಿ ನಿಧಾನವಾಗಿ ಪಾವಟಿಗೆಗಳನ್ನಿಳಿದು ಬರುತ್ತಿದ್ದಳು. ಜರತಾರಿ ರೇಶಿಮೆ ಸೀರೆ ಉಟ್ಟಿದ್ದಳು. ಕೈಯಲ್ಲಿ ಚರ್ಮದ ವ್ಯಾನಿಟಿ ಬ್ಯಾಗೊಂದನ್ನ ಹಿಡಿದು ಮದುವಣಗಿತ್ತಿಯ ರೀತಿಯಲ್ಲಿ ಬಳುಕುತ್ತಾ ವೈಯಾರದಿಂದ ಪಾವಟಿಗೆಯನ್ನ ಇಳಿಯುತ್ತಿದ್ದರೆ, ನೋಡುವವರ ಕಣ್ಣಿಗೆ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆಯರು ನೆನಪಾಗಬೇಕು. ತನ್ನ ಸೌಂದರ್ಯವನ್ನು ಕಂಡು ಕಣ್ಣಲ್ಲೇ ಮಂಡಿಗೆ ತಿನ್ನುವವರನ್ನು ಕಂಡಾಗ ಅವಳು ನಗೆಯ ಬುಗ್ಗೆಯಾಗುವಳು.

ಹತ್ತಾರು ಕಾರು ಒಂದರ ಹಿಂದೆ ಒಂದರಂತೆ ಬಂದು ನಿಲ್ಲುವವು. ಕಾರಿನೊಳಗಿಂದ ಗಣ್ಯ ವ್ಯಕ್ತಿಗಳು ಒಬ್ಬೊಬ್ಬರಾಗಿ ಇಳಿಯುವಾಗ ಅಂಗರಕ್ಷಕ ಪಡೆಯವರು ಅವರ ಬೆಂಗಾವಲಿಗೆ ನಿಂತು, ಅವರನ್ನ ಹಿಂಬಾಲಿಸುತ್ತಿದ್ದರು. ಆ ಗಣ್ಯರೂ ರಾಗಿಣಿಯ ಬೆಡಗು ಬಿನ್ನಾಣಕ್ಕೆ ಸೋತವರೇ. ಅವರಲ್ಲೊಬ್ಬ ಅವಳನ್ನು ಆಲಿಂಗಿಸುವ ತವಕ. ಅವಳೋ ಅವನು ಹತ್ತಿರವಾಗುತ್ತಿದ್ದಂತೆ ಇದ್ದಕ್ಕಿದ್ದಂತೆ ಅದೃಶ್ಯವಾದಳು. ಜನ ಜಂಗುಳಿ ಹೆಚ್ಚಿತು.

ಈಗ ರವೀಂದ್ರ ಕಲಾಕ್ಷೇತ್ರದ ಪಾವಟಿಗೆಯ ಮೇಲೆ ಅಕ್ಷರಶಃ ಜನಸಾಗರ. ಒಳಗಡೆ ಕತ್ತಲೆಯನ್ನು ಸೀಳಿ ರಂಗಸ್ಥಳದ ಮೇಲೆ ಬೆಡಗಿನ ಬೆಳಕು ಹರಿಯಿತು. ರಂಗಸ್ಥಳದ ಮೇಲೆ ಮೇಳದ ಗುಂಪು ಪ್ರತ್ಯಕ್ಷವಾಯಿತು. ಏಕತಾರಿ ಹಿಡಿದು ಖಂಜೀರ ಬಾರಿಸುತ್ತಾ, ತಾಳ ಹಾಕುತ್ತಾ, ತಾಳಕ್ಕೆ ತಕ್ಕಂತೆ ಕುಣಿಯುತ್ತಾ, ರಾಗವಾಗಿ ಹಾಡುತ್ತಾ ರಂಗಸ್ಥಳದ ಮಧ್ಯಭಾಗಕ್ಕೆ ಬಂದು ನಿಲ್ಲುವರು. ಕಲಾವಿದರು ಜನರನ್ನು ರಂಜಿಸುತ್ತಿದ್ದರು.

ರಂಗದ ಮೇಲೆ ಕತ್ತಲು ಕವಿದು, ಮತ್ತೆ ಬೆಳಕು ನಿಧಾನವಾಗಿ ಹೊನಲಾಗಿ, ಸೀತೆಯ ಪಾತ್ರಧಾರಿ ರಾಗಿಣಿ ಕಾಣಿಸಿಕೊಂಡಳು. ಬೆಳಕನ್ನು ಅವಳನ್ನೇ ಕೇಂದ್ರೀಕರಿಸಿ ಹರಿಯುವುದು. ರಾಗಿಣಿ ನಾರುಮುಡಿ ತೊಟ್ಟು, ತಲೆಗೂದಲನ್ನ ಗಂಟು ಹಾಕಿ, ತುರುಬಿನ ಸುತ್ತ ಮಲ್ಲಿಗೆಯ ದಂಡೆ ಸುತ್ತಿದ್ದಳು. ವಾಲ್ಮೀಕಿ ಮಹಾಋಷಿಯ ಆಶ್ರಮದ ಮುಂಭಾಗದಲ್ಲಿ ನಿಂತು, 'ಅಯ್ಯೋ... ದೇವರೇ, ಮಕ್ಕಳು ನನ್ನನ್ನು ತೊರೆದು ಎಲ್ಲಿಗೆ ಹೋಗಿದ್ದಾರೆ! ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಗೂಡಿಗೆ ಮರಳುವ ಹೊತ್ತು. ಇಷ್ಟೊತ್ತಾದರೂ ಕಾಣುತ್ತಿಲ್ಲವಲ್ಲ ಕಂದಮ್ಮಗಳು...' ಎಂದು ಪ್ರಲಾಪಿಸುತ್ತಾ ಅತ್ತಿಂದಿತ್ತ ತಿರುಗುವಳು.

ಮತ್ತೊಂದು ಬದಿಯಲ್ಲಿ ಲವಕುಶರಿರುವ ಕಡೆಗೆ ಬೆಳಕು ಹರಿಯುವುದು. ಆಗ 'ಕತ್ತಲಾವರಿಸಿದೆ. ಬೇಗ ಬೇಗನೇ ಆಶ್ರಮಕ್ಕೆ ಹೋಗೋಣವೇ ಸಹೋದರ? ಅಲ್ಲಿ ಮಾತೆ ನಮಗಾಗಿ ಕಾಯುತ್ತಿರಬಹುದು. ಅವರನ್ನು ನೋಯಿಸುವುದು ಸಲ್ಲ' ಎಂದು ಲವ ಹೇಳಿದ. 'ಹೌದೌದು ಸಹೋದರ, ನಡೆ ಬೇಗ ಹೋಗೋಣ...' ಎಂದ ಕುಶ. ಆಗ ರಂಗದ ಮೇಲೆಲ್ಲಾ ಬೆಳಕು ಚೆಲ್ಲುವುದು. ಲವಕುಶರನ್ನ ನೋಡಿದ ಸೀತೆ, 'ಅಯ್ಯೋ ಮಕ್ಕಳೇ... ಈ ಆಶ್ರಮದಲ್ಲಿ ನೀವಿಲ್ಲದ್ದನ್ನ ನೋಡಿ ಕಂಗಾಲಾಗಿದ್ದೆ. ಅದೆಲ್ಲಿಗೆ ಹೋಗಿದ್ದಿರಿ...' ಎಂದು ಪ್ರಲಾಪ ಮಾಡುತ್ತಾ ಅವರನ್ನ ತಬ್ಬಿಕೊಂಡಳು.

'ನಮ್ಮನ್ನೇನು ಚಿಕ್ಕ ಮಕ್ಕಳೆಂದು ಭಾವಿಸಿದಿರಾ ಮಾತೆ! ವಾಯುವಿಹಾರಕ್ಕೆಂದು ಹೋಗಿದ್ದೆವಷ್ಟೇ. ಸ್ವಲ್ಪ ತಡವಾಗಿದೆ. ಅಷ್ಟಕ್ಕೇ ಗಾಬರಿಯಾಗುವುದೇ ಮಾತೆ?' ಎಂದು ಮಕ್ಕಳು ಹೇಳಿದಾಗ 'ಕರುಳಿನ ಕೂಗು ನಿಮಗೆಲ್ಲಿ ಕೇಳಿಸೀತು ಮಕ್ಕಳೇ, ಬನ್ನಿ ಒಳ ಹೋಗೋಣ' ಎಂದು ಮತ್ತೆ ಇಬ್ಬರನ್ನೂ ತಬ್ಬಿಕೊಂಡಾಗ, ರಂಗದ ಮೇಲೆ ಕತ್ತಲಾವರಿಸುವುದು.

ಗಣ್ಯ ವ್ಯಕ್ತಿಗಳು ರಾಗಿಣಿಯನ್ನ ಕಾಣಲು ಗ್ರೀನ್ ರೂಮಿಗೆ ಬಂದರು. ಅವಳ ಅಭಿನಯ ಸೌಂದರ್ಯಕ್ಕೆ ಮರುಳಾಗಿ, ಮತ್ತೊಮ್ಮೆ ಅವಳನ್ನ ಕಣ್ತುಂಬಿಕೊಳ್ಳಲು, ಮೆಚ್ಚಿಗೆ ಸೂಚಿಸಲು ಅಲ್ಲಿಗೆ ಬಂದರೆ, ಅವಳನ್ನ ಕಾಣದೆ ನಿರಾಶೆಯಾದರು.

***

ರಾಗಿಣಿ ರವೀಂದ್ರ ಕಲಾಕ್ಷೇತ್ರದ ಸನಿಹದಲ್ಲೇ ಇರುವ ಸಿದ್ದಯ್ಯ ರಸ್ತೆಯ ಪಕ್ಕ ಸಂಪಂಗಿರಾಮನಗರದ ಮುಖ್ಯರಸ್ತೆಯ ಮೇಲೆ ಮನೆಯ ಎರಡನೇ ಮಹಡಿಯಲ್ಲಿದ್ದ ಕೊಠಡಿ ಹತ್ತಿರ ಬಂದು, ಅದರ ಬೀಗ ತೆಗೆದು ಬಾಗಿಲನ್ನು ತಳ್ಳಿದಳು. ತಳ್ಳಿದ ಶಬ್ದಕ್ಕೆ ಮಂಚದ ಮೇಲಿದ್ದ 'ಶಿವಸ್ವಾಮಿ' ಎದ್ದ. ಸಹಾಯಕ್ಕೆ ಕೋಲನ್ನು ಹಿಡಿದುಕೊಂಡು, 'ಇಷ್ಟೊತ್ತು ಯಾರ ಜೊತ್ಗೆ ಇದ್ದೆ ಹೇಳೇ... ಮನೆಯೊಳ್ಗೆ ಗಂಡಾ ಅನ್ನೋ ಪ್ರಾಣಿ ಇದ್ದಾನೆ ಅನ್ನೋ ಪ್ರಜ್ಞೆ ಇದೆಯೇನು ನಿಂಗೆ? ಸ್ವಲ್ಪವೂ ಭಯ ಇಲ್ಲ ಭಕ್ತಿ ಇಲ್ಲ...' ಎಂದು ತೊದಲುತ್ತಾ, ತಟ್ಟಾಡುತ್ತಾ ಮೈಮೇಲೆ ನಿಯಂತ್ರಣವಿಲ್ಲದೆ ಒಂದೇ ಸಮನೆ ಕೂಗಾಡಿದ.

ರಾಗಿಣಿ ಬ್ಯಾಗನ್ನು ಮೇಜಿನ ಮೇಲಿಟ್ಟು, ಅದರೊಳಗಿದ್ದ ಕ್ಯಾಡ್‌ಬರೀಸ್ ಚಾಕೊಲೇಟನ್ನ ತೆಗೆದು ಅವನ ಕೈಗಿತ್ತಳು. 'ಓಹೋ.... ಚಾಕ್‌ಲೇಟ್ ತಂದಿದ್ದೀಯಾ... ನೀನೆಷ್ಟು ಒಳ್ಳೆಯವಳು ಗೊತ್ತಾ... ತತ್ತಾ... ಥ್ಥಿ... ಥ್ಥಿ...!' ಎಂದು ಚಾಕೊಲೇಟ್‌ನ್ನ ತೆಗೆದುಕೊಂಡ. ಅದರ ಕವರನ್ನ ಬಿಚ್ಚಿ, ಕಚ್ಚಿ ತಿನ್ನಲು ಮುಂದಾದ. ಅಲ್ಲಿಂದ ರಾಗಿಣಿ ಅಡಿಗೆ ಮನೆಗೆ ಬಂದಳು. ತಟ್ಟೆಯೊಳಗೆ ಅನ್ನ ಸಾರು ಕಲಸಿ ತಂದು ಅವನ ಮುಂದಿಟ್ಟಳು. ಗಬಗಬನೆ ತಿಂದ. 'ಸಾಕು...!' ಅಂದ. ಸ್ವಲ್ಪ ಹೊತ್ತು ಸುಧಾರಿಸಿಕೊಂಡು ಸುತ್ತಾಡಿದಳು. ಅವನ ತೋಳುಗಳನ್ನು ಹೆಗಲ ಮೇಲಿರಿಸಿಕೊಂಡು ಕೋಣೆಯೊಳಗೆ ಸುತ್ತಾಡಿದಳು.

ಅವನು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದ. ಕೈಕಾಲುಗಳು ಸ್ವಾಧೀನ ತಪ್ಪಿದ್ದವು. ಒಂದೊಂದು ಸಾರಿ ಕುಳಿತ ಕಡೆಯಲ್ಲೇ ಮಲಮೂತ್ರ ಮಾಡಿಕೊಳ್ಳುತ್ತಿದ್ದ. ಅದನ್ನೆಲ್ಲಾ ಸಹಿಸಿಕೊಂಡು ಮೌನಿಯಾಗಿರುತ್ತಿದ್ದಳು. ಸೋದರತ್ತೆಯ ಮಗ. ಬಲವಂತದ ಮದುವೆ. ವಿಧಿ ಇರಲಿಲ್ಲ. ದಿನವೂ ಅವನೊಂದಿಗೆ ಸೆಣಸಾಟ. ಬಿರು ನುಡಿ, ಕೊಂಕು ನುಡಿ, ಸಹನೆ ಮೀರಿದ ವರ್ತನೆ. ಈಗ ಲಕ್ವಾ ಹೊಡೆದಿದೆ. ಆದರೂ... ಮನಃಸ್ಥಿತಿ ಸುಧಾರಿಸಿಲ್ಲ. ಇವನೊಂದಿಗಿನ ಜೀವಯಾನ ದುಸ್ತರ. ಪಲುಕುಗುಟ್ಟದ ಸುರತ.

***

ಮಧ್ಯಾಹ್ನ ಎರಡರ ಸಮಯ. ರಾಗಿಣಿ ಟೌನ್‌ಹಾಲ್ ಪಾವಟಿಗೆ ಮೇಲಿಂದ ಇಳಿದು ಬರುತ್ತಿದ್ದಳು. ಸಾಧಾರಣ ಸೀರೆ, ಕುಪ್ಪಸ ತೊಟ್ಟಿದ್ದಳು. ಮುಖ ಮಾತ್ರ ಬಿಸಿಲಿಗೆ ಬಾಡಿದ ಕೆಂದಾವರೆಯಂತೆ ಬಿಳಿಚಿಕೊಂಡು, ದಿಕ್ಕೆಟ್ಟ ಅಶಾಂತಿಯ ಗೆರೆಗಳು